ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಈ ಕಾಮಗಾರಿಯನ್ನು ಆಯವ್ಯಯದಲ್ಲಿ ಸೇರಿಸಿ ತೆಗೆದುಕೊಳ್ಳುವುದು ಅವಶ್ಯವೆಂದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ, ಆದರೆ ಲಭ್ಯವಿರುವ ಅನುದಾನವು ಮುಂದುವರೆದ ಕಾಮಗಾರಿಗಳಿಗೆ ಕೂಡಾ ಸಾಕಾಗುವಷ್ಟು ಇಲ್ಲದ ಕಾರಣ ೧೯೯೦-೯೧ನೇ ಸಾಲಿನ ಕರಡು ಆಯವ್ಯಯದಲ್ಲಿ ಯಾವುದೇ ಹೊಸ ಕಾಮಗಾರಿಗಳನ್ನು ಸೂಚಿಸಲಾಗಿಲ್ಲ. ಹಾಗಿದ್ದು ಮುಂದೆ ಆರ್ಥಿಕ ಪರಿಸ್ಥಿತಿ ಸುಧಾರಿಸಿದಲ್ಲಿ ಮತ್ತು ಸಾಕಷ್ಟು ಅನುದಾನ ಲಭ್ಯವಾದಲ್ಲಿ ಈ ಕಾಮಗಾರಿಯನ್ನು ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗುವಂತೆ ಈ ಕಾಮಗಾರಿಯನ್ನು ಎರಡನೇ ಆಧ್ಯತೆಯ ಪಟ್ಟಿಯಲ್ಲಿ ಸೇರಿಸಲಾಗಿದೆ.

ಶ್ರೀ ವಿಜಯಕುಮಾರ್ ಖಿಂಡ್ರೆ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಒಂದು ಮಾತು ಕೇಳಬಯಸುತ್ತೇನೆ. ಈ ಬ್ರಿಡ್ಜ್ ಕಮ್ ಬ್ಯಾರೇಜ್ ಇರುವ ರಸ್ತೆ ಬಹಳ ಮುಖ್ಯವಾದ ರಸ್ತೆ. ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಅಲ್ಲಿ ಓಡಾಡುತ್ತವೆ. ಒಂದು ಸಮಯದಲ್ಲಿ ಒಂದು ಬಸ್ಸು ಮಾತ್ರ ಹೋಗುವುದಕ್ಕೆ ಅಲ್ಲಿ ಸಾಧ್ಯ ಈ ಕೆಲಸ ಬೇಗ ತೆಗೆದುಕೊಳ್ಳದಿದ್ದರೆ ಅಲ್ಲಿ ಆಕ್ಸಿಡೆಂಟ್‌ಗಳಾಗುವ ಸಂಭವ ಇದೆ. ಆದ್ದರಿಂದ ಇದರ ಬಗ್ಗೆ ಗಮನ ಕೊಟ್ಟಿದ್ದೀರಾ ? ಮತ್ತೆ ಮುಂದೆ ಏನು ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೆ. ಈ ಬ್ರಿಡ್ಜ್ ಕಮ್ ಬ್ಯಾರೇಜ್ ಹತ್ತು ಅಡಿ ಆಗಲ ೫೮೫ ಅಡಿ ಉದ್ದ ಇದೆ. ಆಗಲ ಸಂಚಾರಕ್ಕೆ ಸಾಕಾಗುವುದಿಲ್ಲ ಎಂಬುದನ್ನು ನಾವು ಮನಗಂಡಿದ್ದೇವೆ. ಈಗಾಗಲೇ ಹಲವಾರು ಜನ ಶಾಸನಸಭಾ ಸದಸ್ಯರು ಕೂಡ ಅಂದರೆ ಸನ್ಮಾನ್ಯ ಕಲ್ಯಾಣರಾವ್ ಮೊಳಕೇರಿ ಅವರು, ಭೀಮಣ್ಣ ಖಿಂಡ್ರೆಯವರು ಈ ರಸ್ತೆಯನ್ನು ವಿಸ್ತರಣೆ ಮಾಡಿ ಕನಿಷ್ಠಪಕ್ಷ ೨೨ ಅಡಿಗಾದರೂ ಹೆಚ್ಚಿಸಬೇಕೆಂದು ಮನವಿ ಕೊಟ್ಟಿದ್ದಾರೆ. ಆದರ ಬಗ್ಗೆ ಪರಿಶೀಲಿಸಿ ಅಂದಾಜು ಮಾಡಿದ್ದೇವೆ. ಅದಕ್ಕೆ ೩೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆರ್ಥಿಕ ಪರಿಸ್ಥಿತಿಯಿಂದ ಈ ಸಾರಿಯ ಆಯವ್ಯಯದಲ್ಲಿ ಸೇರಿಸುವುದಕ್ಕೆ ಆಗಲಿಲ್ಲ. ಆದ್ದರಿಂದ ಎರಡನೇ ಆಧ್ಯತೆಯ ಪಟ್ಟಿಯಲ್ಲಿ ಸೇರಿಸಿ ಕೆಲಸ ಮಾಡಿಸುವುದಕ್ಕೆ ಆಶ್ವಾಸನೆ ಕೊಡುತ್ತೇನೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿನ ರಸ್ತೆಗಳ ದುರಸ್ತಿ

೧೭೪. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಸರಸಂಬಾ-ಕೋಡಂಗಲ್ ರಸ್ತೆ ಮತ್ತು ಸೇಡಂ-ಯಾದಗಿರಿ ರಸ್ತೆಗಳಲ್ಲಿ ವಾಹನಗಳು ಸಂಚರಿಸಲು ಯೋಗ್ಯವಿಲ್ಲದೆ ದುಸ್ಥಿತಿಯಲ್ಲಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ರಸ್ತೆಗಳ ದುರಸ್ತಿಯನ್ನು ಸರಿಪಡಿಸಲು ತೆಗೆದುಕೊಂಡ ಕ್ರಮಗಳೇನು ?

ಇ) ೧೯೮೮-೮೯ ಮತ್ತು ೧೯೮೯-೯೦ರಲ್ಲಿ ಈ ರಸ್ತೆಗಳಿಗೆ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಸರಸಂಬಾ-ಕೋಡಂಗಲ್ ರಸ್ತೆ ಮತ್ತು ಸೇಡಂ-ಯಾದಗಿರಿ ರಸ್ತೆಯು ೧೯೮೮-೮೯ರಲ್ಲಿ ಆಗಿದ್ದ ಅತೀ ಮಳೆಯಿಂದ ಹಾನಿಗೀಡಾದ ವಿಷಯ ಸರಕಾರದ ಗಮನಕ್ಕೆ ಬಂದಿರುತ್ತದೆ.

ಆ) ವಿಶೇಷ ದುರಸ್ತಿ ಹಾಗೂ ಸಾಮಾನ್ಯ ನಿರ್ವಹಣೆಯನ್ನು ತೆಗೆದುಕೊಂಡು ಈ ರಸ್ತೆಗಳ ಕ್ಯಾರೇಜ್ ವೇಯನ್ನು ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ಇಡಲಾಗಿದೆ.

ಇ) ಸೇಡಂ ತಾಲ್ಲೂಕಿನಲ್ಲಿಯ ಸರಸಂಬಾ-ಕೋಡಂಗಲ್ ರಸ್ತೆಗೆ ೧೯೮೮-೮೯ನೇ ಸಾಲಿನಲ್ಲಿ ೪,೫೭,೦೨೩-೦೦ ರೂ.ಗಳನ್ನು ಹಾಗೂ ೧೯೮೯-೯೦ನೇ ಸಾಲಿನಲ್ಲಿ ಫೆಬ್ರುವರಿ ಕೊನೆಯವರೆಗೆ ೪,೬೮,೮೮೪-೦೦ ರೂ.ಗಳನ್ನು ಖರ್ಚು ಮಾಡಲಾಗಿದೆ. ಮತ್ತು ಸೇಡಂ-ಯಾದಗಿರಿ ರಸ್ತೆಗೆ ೧೯೮೮-೮೯ನೇ ಸಾಲಿನಲ್ಲಿ ೨ ೧೪,೪೮೯-೦೦ ರೂ.ಗಳನ್ನು ಹಾಗೂ ೧೯೮೯-೯೦ನೇ ಸಾಲಿನಲ್ಲಿ ಫೆಬ್ರುವರಿ ಕೊನೆಯವರೆಗೆ ೨,೯೦,೦೦೨-೦೦ ರೂ.ಗಳನ್ನು ಖರ್ಚು ಮಾಡಲಾಗಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಏನು ಈ ಎರಡೂ ರಸ್ತೆಗಳಲ್ಲಿ ಇಷ್ಟು ಹಣವನ್ನು ಖರ್ಚು ಮಾಡಿ ಕೆಲಸ ಮಾಡಿದ್ದೀವೆ ಎಂದು ಹೇಳಿದ್ದಾರೆ ಅಷ್ಟು ಹಣ ಖರ್ಚು ಆಗಿಲ್ಲವೆಂದು ನನ್ನ ಭಾವನೆ. ನಮ್ಮ ಸೇಡಂನ ಅಧೀನದಲ್ಲಿ ಬರುವ ರಸ್ತೆಯಲ್ಲಿ ಇಷ್ಟು ಹಣ ಏನು ಖರ್ಚುಆಗಿದೆ ಎಂದು ತೋರಿಸಿದ್ದಾರೆ ಆ ರಸ್ತೆಯ ಮೇಲೆ ಇಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎಂದು ತೋರಿಸಿದ್ದರೂ ಈಗಲೂ ಕೂಡಾ ಆ ರಸ್ತೆಯಲ್ಲಿ ವಾಹನಗಳು ಹೋಗುವುದು ಬಹಳ ಕಷ್ಟ ವಾಗಿದೆ ಆ ಕಾರಣ ಇಷ್ಟು ಹಣ ಅಲ್ಲಿ ಖರ್ಚು ಆಗಿಲ್ಲ ಎಂದು ನನ್ನ ಭಾವನೆ. ಆ ಕಾರಣ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೇ, ಆ ಎರಡೂ ರಸ್ತೆಗಳಿಗೆ ಅಷ್ಟು ಹಣ ಖರ್ಚು ಆಗಿರತಕ್ಕದ್ದು ನಿಜ. ಈ ಭಾಗದಲ್ಲಿ ಈ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿದ್ದು ಈ ರಸ್ತೆಯ ದುರಸ್ತಿ ಕೆಲಸಕ್ಕಾಗಿ ೧೧ ಕೋಟಿ ರೂಪಾಯಿ ಅನುದಾನ ಬೇಕೆಂದು ಕೇಂದ್ರ ಸರ್ಕಾರಕ್ಕೆ ಕೇಳಿದ್ದೇವೆ. ಆ ಹಣ ಇನ್ನೂ ಕೂಡಾ ಬಂದಿಲ್ಲ. ಒಂದು ವೇಳೆ ಅದು ಶೀಘ್ರದಲ್ಲಿ ಬಂದರೆ ಅದನ್ನು ಅಲ್ಲಿಗೆ ವಿನಿಯೋಗಿಸುವುದರ ಮೂಲಕ ಅಲ್ಲಿನ ಸಂಚಾರಕ್ಕೆ ಅನುಕೂಲ ಆಗುವ ಹಾಗೆ ದುರಸ್ತಿ ಮಾಡಿಕೊಡುತ್ತೇವೆಂದು ಹೇಳುತ್ತೇನೆ

ಶಿವಮೊಗ್ಗ ಜಿಲ್ಲೆಯ ಅಪ್ಪರ್ ತುಂಗಾ ಅಣೆಕಟ್ಟು ನಿರ್ಮಾಣ

೧೦೯. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯ ತುಂಗಾ ಮೇಲ್ದಂಡೆ ಅಣೆಕಟ್ಟಿನ ನಿರ್ಮಾಣದ ಬಗ್ಗೆ ಸರ್ಕಾರದ ನಿಲುವೇನು ?

ಆ) ಈ ಬೃಹತ್ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದೆ ?

ಇ) ಈ ಯೋಜನೆಯಿಂದ ಎಷ್ಟು ಹೆಕ್ಟೇರ್ ಭೂಮಿ ನೀರಾವರಿಯಾಗುವುದು ಮತ್ತು ಅದಕ್ಕೆ ತಗಲುವ ಅಂದಾಜು ವೆಚ್ಚ ವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮತ್ತು ಆ) ಯೋಜನಾ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ೯೪,೬೦೦ ಹೆಕ್ಟೇರುಗಳು, ೨೭,೧೪೧ ಲಕ್ಷ ರೂಪಾಯಿಗಳು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ತುಂಗಾ ಮೇಲ್ದಂಡೆ ಅಣೆಕಟ್ಟಿನ ನಿರ್ಮಾಣದ ಬಗ್ಗೆ ಆ ಭಾಗದ ಜನ ಬಹಳ ವರ್ಷಗಳಿಂದ ಕನಸು ಕಾಣುತ್ತಿದ್ದಾರೆ. ಅವರ ಕನಸು ನನಸಾಗುವುದಕ್ಕೆ ಈ ವರ್ಷ ಅದನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಹಾಗೂ ಈ ಯೋಜನೆಯ ಪ್ರಯೋಜನ ಶಿವಮೊಗ್ಗ ಜಿಲ್ಲೆ ಬಿಟ್ಟು ಬೇರೆ ಜಿಲ್ಲೆಯವರಿಗೂ ದೊರಕುತ್ತದೆಯೇ? ಹಾಗೂ ಇದರ ಸರ್ವೆ ಆಗುವ ಕಾಲದಲ್ಲಿ ಶಿಕಾರಿಪುರ ತಾಲ್ಲೂಕನ್ನು ಇದರಿಂದ ಕೈಬಿಟ್ಟಿದ್ದಾರೆ.ದಯಮಾಡಿ ಈ ತಾಲ್ಲೂಕನ್ನು ಅದರಲ್ಲಿ ಸೇರಿಸಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೇ, ಈ ಯೋಜನೆಯ ಮೂಲ ಯೋಜನೆ ಪ್ರಕಾರ ಇದನ್ನು ಮಾಲತಿ ಹತ್ತಿರ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಅಣೆಕಟ್ಟನ್ನು ಕಟ್ಟಬೇಕೆಂದು ಇದ್ದು ಬಹಳ ಅರಣ್ಯಭೂಮಿ ನಾಶ ಆಗುವುದರಿಂದ ಅದು ಸಾಧುವಲ್ಲವೆಂದು ತಿಳಿದು ೨೦೧೯ನೇ ಮೈಲಿಕಲ್ಲಿನ ಹತ್ತಿರ ಮಾಡಿದರೆ ಅನುಕೂಲವಾಗುತ್ತದೆಂದು ಹೇಳುವ ವರದಿ ಈಗಾಗಲೇ ಸರ್ಕಾರಕ್ಕೆ ಬಂದಿದೆ. ಇದರಲ್ಲಿ ೩೭ ಟಿಎಂಸಿ ಅಡಿ ನೀರು ಶೇಖರಣೆ ಆಗಲಿದ್ದು ೪೨,೫೦೦ ಎಕರೆಗೆ ನೀರಾವರಿ ಒದಗಿಸುವ ಉದ್ದೇಶವನ್ನು ಹೊಂದಿದ್ದೇವೆ. ಮಾನ್ಯ ಸದಸ್ಯರು ಇದರಲ್ಲಿ ಶಿಕಾರಿಪುರ ತಾಲ್ಲೂಕು ಬಿಟ್ಟು ಹೋಗಿದೆ ಎಂದು ಹೇಳಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಈ ಬಗ್ಗೆ ನನ್ನ ಅಧಿಕಾರಿಗಳಿಗೆ ಸೂಚನೆಯನ್ನು ಕೂಡಾ ಕೊಡುತ್ತೇನೆ. ಶೀಘ್ರದಲ್ಲಿ ಅದನ್ನು ಮಾಡುವುದಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಿಂದೆ ಯಾರು ಯಾರು ನೀರಾವರಿ ಮಂತ್ರಿಗಳು ಆದರೂ ಅವರೆಲ್ಲಾ ತಮ್ಮ ತಮ್ಮ ಜಿಲ್ಲೆಗೆ ಹೆಚ್ಚು ಗಮನ ಕೊಟ್ಟರೇ ಹೊರತು ಬೇರೆ ಕಡೆ ಗಮನ ಕೊಡಲಿಲ್ಲ. ಆ ರೀತಿ ತಮ್ಮ ಕಾಲದಲ್ಲಿ ಆಗಬಾರದು. ತಮ್ಮ ಕಾಲದಲ್ಲಾದರೂ ಈ ಬಗ್ಗೆ ಆದ್ಯತೆ ಕೊಟ್ಟು ಈ ವರ್ಷವೇ ಈ ಕೆಲಸ ಪ್ರಾರಂಭ ಮಾಡುವ ಆಶ್ವಾಸನೆಯನ್ನು ಕೊಡುತ್ತೀರಾ ?